UNIVERSITY LIBRARY
TUESDAY 16-09-2025
Agri Newspaper Clippings
For more information visit University Library Website
Web - uasbagrilibindia.org
E-mail- librarian@uasbangalore.edu.in

# ಕೃತಕ ಬುದ್ಧಿಮತ್ತೆ, ಮಷಿನ್ ಕಲಿಕೆಗೆ ಪ್ರತ್ಯೇಕ ವಿಭಾಗ



**ಬೆಂಗಳೂರು:** ಸದ್ಯದಲ್ಲಿಯೇ ಕೃತಕ ಬುದ್ಧಿಮತ್ತೆ ಹಾಗೂ ಮಷಿನ್ ಕಲಿಕೆಗಾಗಿ ವಿವಿಯಲ್ಲಿ ಪ್ರತ್ಯೇಕ ವಿಭಾಗ ಆರಂಭಿಸಲಾಗುವುದು ಎಂದು ಕೃಷಿ ವಿವಿ ಕುಲಪತಿ ಡಾ.ಎಸ್.ವಿ.ಸುರೇಶ್ ತಿಳಿಸಿದರು. ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಸ್ಯಾಮ್‌ಸಂಗ್ ಇನೊವೇಶನ್ ಕ್ಯಾಂಪಸ್, ಎಲೆಕ್ಟ್ರಾನಿಕ್ಸ್ ಸೆಕ್ಟರ್ ಸ್ಕಿಲ್ ಕೌನ್ಸಿಲ್ ಆಫ್ ಇಂಡಿಯಾ ಹಾಗೂ ಮ್ಯಾಪಿಂಗ್ ಸ್ಕಿಲ್ಸ್ ಟೆಕ್ನಾಲಜಿ ಸಂಸ್ಥೆ ನೋಯಿಡಾ ಜಂಟಿಯಾಗಿ ನಗರದ ಕೃಷಿ ವಿವಿಯಲ್ಲಿ ಆಯೋಜಿಸಲಾಗಿದ್ದ ಕೃಷಿಯಲ್ಲಿ ಕೃತಕ ಬುದ್ಧಿಮತ್ತೆ ಬಳಕೆ ಕುರಿತು ತರಬೇತಿ ಹಾಗೂ ಭವಿಷ್ಯದ ಅವಕಾಶಗಳ ಬಗ್ಗೆ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು. ಕೃತಕ ಬುದ್ಧಿಮತ್ತೆಯನ್ನು ಸಮರ್ಪಕವಾಗಿ ಬಳಸುವ ಮೂಲಕ ಕೃಷಿಯನ್ನು ಹೆಚ್ಚು ಪರಿಣಾಮಕಾರಿಯಾಗಿಸಬೇಕು. ಸದ್ಯದಲ್ಲಿಯೇ ಕೃತಕ ಬುದ್ಧಿಮತ್ತೆ ಹಾಗೂ ಮಷಿನ್ ಕಲಿಕೆಗಾಗಿ ವಿವಿಯಲ್ಲಿ ಪ್ರತ್ಯೇಕ ವಿಭಾಗ ಆರಂಭಿಸಲಾಗುವುದು. ಅಲ್ಲದೇ, ವಿವಿಯ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ಕೃತಕ ಬುದ್ಧಿಮತ್ತೆ ಕುರಿತು ಪಠ್ಯದಲ್ಲಿ ಸೇರಿಸಿ ಬೋಧನೆಗೆ ಅವಕಾಶ ಕಲ್ಪಿಸಲಾಗುವುದು ಎಂದು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಕೃಷಿ ವಿವಿ ಕುಲಸಚಿವ ಡಾ.ಕೆ.ಸಿ.ನಾರಾಯಣಸ್ವಾಮಿ, ಡೀನ್ ಡಾ. ಎನ್.ಬಿ.ಪ್ರಕಾಶ್, ಇಎಸ್‌ಎಸ್‌ಐ ಸಂಸ್ಥೆಯ ಏಕಾಂಶ್ ರಾಜ್ ಸೇರಿದಂತೆ ಇತರರಿದ್ದರು.

Hosadiganta pg 12

## ಕೃಷಿ ಮೇಳದಲ್ಲಿ ಗಮನ ಸೆಳೆದ ವಿಶಿಷ್ಟ ಆಕರ್ಷಣೆ

# ಕೀಟದ ಸಿಂದೂರ ಕ್ರಾಂತಿ!

ಮಹಾಂತೇಶ ಕಣವಿ

**ಧಾರವಾಡ:** ಕೃಷಿ ವಿಶ್ವವಿದ್ಯಾಲಯದ ಕೃಷಿ ಮೇಳದಲ್ಲಿ ಈ ಬಾರಿ ರೈತರ ಗಮನ ಸೆಳೆದ ವಿಶಿಷ್ಟ ಆಕರ್ಷಣೆ ಅಂದರೆ 'ಆಪರೇಷನ್ ಸಿಂದೂರ' ಕೀಟ ಮಾದರಿ ಪ್ರದರ್ಶನ!

ಕೃಷಿ ವಿಜ್ಞಾನಿಗಳು, ವಿದ್ಯಾರ್ಥಿಗಳ ಪ್ರಯತ್ನದಲ್ಲಿ ರೂಪು ಗೊಂಡ ಈ ಮಾದರಿ, ಕೀಟಗಳ ಜೀವನ ಚಕ್ರ, ಬೆಳೆಗಳಿಗೆ ಹಾನಿ, ಅದರ ನಿಯಂತ್ರಣ ವಿಧಾನ ಮಾದರಿ ಆಕರ್ಷಣೀಯ. 'ಆಪರೇಷನ್ ಸಿಂದೂರ'ದ ಮುಖ್ಯ ಉದ್ದೇಶ, ರೈತರಿಗೆ ತಮ್ಮ ಬೆಳೆಗಳಿಗೆ ಹಾನಿ ಮಾಡುವ ಕೀಟಗಳನ್ನು ಗುರುತಿಸಲು ಮತ್ತು ಅವುಗಳ ನಿಯಂತ್ರಿಸಲು ಸಹಾಯ ಮಾಡಲಿದೆ. ಇಲ್ಲಿ ಕೀಟ ಮಾದರಿಗಳು ಒಂದೇ ಜಾತಿಗೆ ಸೀಮಿತವಾಗಿಲ್ಲ, ಭತ್ತ, ಜೋಳ, ಹತ್ತಿ, ತರಕಾರಿ, ಹಣ್ಣು, ವಿವಿಧ ವಾಣಿಜ್ಯ ಬೆಳೆಗೆ ಹಾನಿ ಮಾಡುವ ನೂರಾರು ಕೀಟಗಳ ಮಾದರಿ ಇದಾಗಿದೆ.

**ನೈಜ ಕೀಟ ಮಾದರಿಗಳು:** ಮೇಳದಲ್ಲಿ ಪ್ರದರ್ಶಿಸಿದ ಕೀಟ ಮಾದರಿಗಳನ್ನು ಸೂಕ್ಷ್ಮವಾಗಿ ಸಂರಕ್ಷಿಸಲಾಗಿದೆ. ಇದರಿಂದ ರೈತರು ಅವುಗಳನ್ನು ಹತ್ತಿರದಿಂದ ನೋಡಲು ಮತ್ತು ಸುಲಭವಾಗಿ ಗುರುತಿಸಬಹುದು.

ಪುಟ 2




ಬೆಳೆಗಳಿಗೆ ಹಾನಿ ಮಾಡುವ ಕೀಟಗಳ ಬಗ್ಗೆ ನಮಗೆ ಸರಿಯಾದ ಮಾಹಿತಿ ಇಲ್ಲ. ಯಾವ ಕೀಟಕ್ಕೆ ಯಾವ ಔಷಧ ಸಿಂಪಡಣೆ ತಿಳಿಯದೆ ಸಾಕಷ್ಟು ರಾಸಾಯನಿಕ ಬಳಸುತ್ತೇವೆ. ಆದರೆ, ಕೀಟಗಳನ್ನು ಕಣ್ಣಾರೆ ನೋಡಿ ಮಾಹಿತಿ ಪಡೆದಿದ್ದು ನಮ್ಮ ಸಮಸ್ಯೆಗಳಿಗೆ ಪರಿಹಾರ ಸಿಕ್ಕಿದೆ.

■ ಶೇಖರಗೌಡ ಹಿರೇಗೌಡರ, ಗದಗ ಜಿಲ್ಲೆಯ ಹೊಸಳ್ಳಿ ರೈತ

# ಕೀಟದ ಸಿಂದೂರ ಕ್ರಾಂತಿ!

ಪುಟ 1

**ಕೀಟಗಳ ಜೀವನ ಚಕ್ರ:** ಕೀಟಗಳ ಮಾದರಿಗಳ ಜತೆ ಅವುಗಳ ಜೀವನ ಚಕ್ರದ ವಿವಿಧ ಹಂತಗಳಾದ ಮೊಟ್ಟೆ, ಲಾರ್ವಾ, ಪ್ಯೂಪಾ ಹಾಗೂ ವಯಸ್ಕ ಹಂತಗಳ ಕುರಿತು ಇಲ್ಲಿ ಮಾಹಿತಿ ನೀಡಲಾಗಿದೆ. ಈ ತಿಳಿವಳಿಕೆಯಾವ ಹಂತದಲ್ಲಿ ಕೀಟಗಳನ್ನು ನಿಯಂತ್ರಿಸಬೇಕು ಎಂಬುದನ್ನು ನಿರ್ಧರಿಸಲು ಸಹಕಾರಿ. ರೈತರ ಬೆಳೆಗಳ ಕೀಟಗಳಿಂದ ರಕ್ಷಿಸಲು ಪರಿಣಾಮಕಾರಿ ಮಾರ್ಗಸೂಚಿಯಾಗಿದೆ.

**ನಿರ್ವಹಣೆ ತಂತ್ರಜ್ಞಾನ:** ಕೀಟಗಳ ಮಾದರಿಗಳನ್ನು ತೋರಿಸುವುದರ ಜತೆ ಅವುಗಳನ್ನು ನಿಯಂತ್ರಿಸಲು ಬಳಸುವ ಜೈವಿಕ ಮತ್ತು ರಾಸಾಯನಿಕ ನಿಯಂತ್ರಣ ವಿಧಾನಗಳ ಬಗ್ಗೆ ಮಾಹಿತಿ ನೀಡಲಾಗಿದೆ.

ಈ ಮಾದರಿಗಳು ಕೃಷಿ ವಿಜ್ಞಾನಿಗಳು ಮತ್ತು ವಿದ್ಯಾರ್ಥಿಗಳಿಗೂ ಒಂದು ಉತ್ತಮ ಸಂಪನ್ಮೂಲವಾಗಿ ಕೆಲಸ ಮಾಡಿದೆ. 'ಆಪರೇಷನ್ ಸಿಂದೂರ' ಕೃಷಿ ಮೇಳದಲ್ಲಿ ಆಕರ್ಷಣೆಯಾಗಿ, ರೈತರ ಜ್ಞಾನ ಹೆಚ್ಚಿಸುವಲ್ಲಿ ಮತ್ತು ಕೃಷಿಯಲ್ಲಿ ಹೊಸ ಕ್ರಾಂತಿ ತಂದಿದೆ.

ಕೀಟವನ್ನು ಸಂಪೂರ್ಣ ನಾಶಪಡಿಸುವುದು ಅಸಾಧ್ಯ. ಆದರೆ, ಜೈವ ನಿಯಂತ್ರಣ ವಿಧಾನಗಳು, ಸಮಗ್ರ ಕೀಟ ನಿರ್ವಹಣೆ ತಂತ್ರಗಳನ್ನು ಬಳಸಿ ರೈತರ ಬೆಳೆಹಾನಿ ತಡೆಯಬಹುದು. ರೈತರಿಗೆ ಕೀಟದ ಈ ಮಾದರಿ ಉಪಕ್ರಮ.

■ ಪ್ರೊ.ಮಹಾಬಲೇಶ್ವರ ಹೆಗಡೆ, ಪಾಧ್ಯಾಪಕರು, ಕೀಟಶಾಸ್ತ್ರ ವಿಭಾಗ ಕೃವಿವಿ ಧಾರವಾಡ

Hosadiganta pg 01

## ಭಾರತದ ವಿರುದ್ಧ ಅಮೆರಿಕದ ವಾಣಿಜ್ಯ ಸಚಿವ ಹೊವಾರ್ಡ್ ಲುಟ್ನಿಕ್ ಆಕ್ರೋಶ

# ಅಮೆರಿಕದ ಜೋಳವನ್ನು ಭಾರತ ಖರೀದಿಸುತ್ತಿಲ್ಲ ಏಕೆ?

**ವಾಷಿಂಗ್ಟನ್:** 140 ಕೋಟಿಯಷ್ಟು ದೊಡ್ಡ ಜನ ಸಂಖ್ಯೆ ಹೊಂದಿರುವ ಭಾರತ ಅಮೆರಿಕದಿಂದ ಒಂದು ಮುಸುಕಿನ ಜೋಳವನ್ನೂ ಖರೀದಿಸುವುದಿಲ್ಲ ಏಕೆ? ಎಂದು ಅಮೆರಿಕದ ವಾಣಿಜ್ಯ ಸಚಿವ ಹೊವಾರ್ಡ್ ಲುಟ್ನಿಕ್ ಪ್ರಶ್ನೆ ಮಾಡಿದ್ದಾರೆ.



ಇಂತಹ ನಡೆಯಿಂದಾಗಿಯೇ ಭಾರತದ ಮೇಲೆ ಶೇ.50 ರಷ್ಟು ಹೆಚ್ಚುವರಿ ಪ್ರತಿಸುಂಕವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿಧಿಸಿದ್ದಾರೆ ಎಂದೂ ಲುಟ್ನಿಕ್ ಕಟಕಿಯಾಡಿದ್ದಾರೆ. ಬೇರೆ ದೇಶಗಳಿಂದ ಜೋಳ ಆಮದು ಮಾಡಿಕೊಳ್ಳುವ ಭಾರತ, ನಮ್ಮ ದೇಶದಿಂದೇಕೆ ಖರೀದಿಸಬಾರದು ಎಂದು ಲುಟ್ನಿಕ್ ಪ್ರಶ್ನೆ ಮಾಡಿದ್ದಾರೆ. ಭಾರತವೇನಾದರೂ ಅಮೆರಿಕದ ಜೋಳವನ್ನು ಖರೀದಿಸದೇ ಇದ್ದರೆ ಮತ್ತಷ್ಟು ದಂಡ ಸುಂಕಗಳನ್ನು ಎದುರಿಸಬೇಕಾಗುತ್ತದೆ ಎಂದೂ ಎಚ್ಚರಿಕೆ ದಾಟಿಯಲ್ಲಿ ಹೇಳಿದ್ದಾರೆ.

**ಅಮೆರಿಕ ಜೋಳಕ್ಕೆ ವಿರೋಧ:** ಅಮೆರಿಕದ ಜೋಳ ತಳಿ ಮಾರ್ಪಡಿಸಲಾಗಿದೆ. ಇಂಥ ಜೋಳಕ್ಕೆ ಭಾರತದಲ್ಲಿ ನಿಷೇಧವಿದೆ. ಅಮೆರಿಕದಲ್ಲಿನ ಶೇ. 90ರಷ್ಟು ಜೋಳ ಇದೇ ಬಗೆಯದ್ದಾಗಿದೆ. ಉಕ್ರೇನ್ ಮತ್ತು ಮ್ಯಾನ್ಮಾರ್‌ನಿಂದ ಸುಂಕ ರಹಿತವಾಗಿ ಭಾರತ ಜೋಳ ಖರೀದಿಸುತ್ತಿದೆ. ಅಮೆರಿಕದಿಂದ ಜೋಳ ಖರೀದಿಸಿದರೆ ಸುಂಕ ತೆರಬೇಕಾಗುತ್ತದೆ. ಜತೆಗೆ ಸಾಗಣೆ ವೆಚ್ಚವೂ ಭಾರೀ ಹೊರೆಯಾಗುತ್ತದೆ. ಹಾಗಾಗಿಯೇ ಅಮೆರಿಕದ ಜೋಳವನ್ನು ಖರೀದಿಸಲು ಭಾರತ ಹಿಂದೇಗೆಯುತ್ತಿದೆ.

### ಅಮೆರಿಕ ಜೋಳಕ್ಕೆ ವಿರೋಧವೇಕೆ?

ಭಾರತದಲ್ಲೇ 4 ಕೋಟಿ ಟನ್ ಮುಸುಕಿನ ಜೋಳ ಬೆಳೆಸಲಾಗುತ್ತದೆ. ವಿಶ್ವದಲ್ಲೇ 6ನೇ ಅತಿದೊಡ್ಡ ಜೋಳ ಉತ್ಪಾದಕ ರಾಷ್ಟ್ರವಾಗಿದೆ.ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ, ತೆಲಂಗಾಣ, ತಮಿಳುನಾಡು, ಉತ್ತರ ಪ್ರದೇಶ, ಬಿಹಾರ, ಮಧ್ಯಪ್ರದೇಶ ರಾಜ್ಯಗಳಲ್ಲಿ ಅತ್ಯಧಿಕವಾಗಿ ಜೋಳ ಬೆಳೆಯಲಾಗುತ್ತದೆ. ಈವರೆಗೂ ಮನುಷ್ಯರ ಆಹಾರಕ್ಕಾಗಿ, ಪಶು ಸಂಗೋಪನೆ ಮತ್ತು ಕೋಳಿ ಸಾಕಣೆ ಕೇಂದ್ರಗಳಿಗೆ ಬಳಸಲಾಗುತ್ತಿದೆ. ಎಥೆನಾಲ್ ತಯಾರಿಕೆಯಲ್ಲಿ ಜೋಳ ಬಳಕೆ ಹೆಚ್ಚಿದ ನಂತರ ಬೇರೆ ದೇಶಗಳಿಂದ ಜೋಳ ಆಮದು ಮಾಡಿಕೊಳ್ಳಲು ಆರಂಭಿಸಿದೆ. ಆದರೆ, ಅಮೆರಿಕದಿಂದ ಜೋಳ ಆಮದು ಮಾಡಿಕೊಳ್ಳುತ್ತಿಲ್ಲ. ಇದೇ ಕಾರಣಕ್ಕೆ ಡೊನಾಲ್ಡ್ ಟ್ರಂಪ್ ಸಿಟ್ಟಾಗಿದ್ದಾರೆ.

Viswavani pg 10

ಕೃಷಿ ಸಂಶೋಧನೆಗೆ ಸರಕಾರದಿಂದ ಹಣಕಾಸಿನ ನೆರವು | ಆಹಾರ ಉತ್ಪಾದನೆಯಲ್ಲಿ ದೇಶ ಸ್ವಾವಲಂಬನೆ ಸಾಧಿಸಲಿ: ಸಿಎಂ

# ಮಣ್ಣಿನ ಫಲವತ್ತತೆಗಾಗಿ ಅಧ್ಯಯನ ನಡೆಸಿ

**ಧಾರವಾಡ:** ಭೂಮಿ ಫಲವತ್ತತೆ ಕಡಿಮೆಯಾಗುತ್ತಿದ್ದು, ಆಹಾರ ಉತ್ಪಾದನಾ ಪ್ರಮಾಣ ಕಡಿಮೆ ಆಗಿದೆ. ಇದಕ್ಕೆ ಸ್ಪಷ್ಟ ಕಾರಣಗಳನ್ನು ಗುರುತಿಸಿ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ರಾಜ್ಯದ ಎಲ್ಲ ಕೃಷಿ ವಿವಿಗಳು ಹೆಚ್ಚಿಗೆ ಅಧ್ಯಯನ ನಡೆಸಬೇಕು. ಇದಕ್ಕೆ ಅಗತ್ಯವಾದ ಹಣಕಾಸಿನ ನೆರವನ್ನು ಒದಗಿಸಲು ಸರಕಾರ ಸಿದ್ಧವಿದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಧಾರವಾಡದ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆಯುತ್ತಿರುವ ಕೃಷಿ ಮೇಳದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಸ್ವಾತಂತ್ರ್ಯದ ಹೊತ್ತಿಲಲ್ಲಿ ಆಹಾರ ಉತ್ಪಾದನೆಯಲ್ಲಿ ಹಿಂದೆ ಇದ್ದವು. ಬಳಿಕ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಬೆಳೆಸಿಕೊಂಡು ರಫ್ತು ಮಾಡುವುದರಲ್ಲೂ ಮುಂದೆ ಬಂದೆವು. ಆದರೆ, ಇತ್ತೀಚಿಗೆ ಫಲವತ್ತತೆ ಕಡಿಮೆ ಆಗುತ್ತಾ ಆಹಾರ ಉತ್ಪಾದನಾ ಪ್ರಮಾಣ ಕಡಿಮೆ ಆಗಿದೆ. ಇದಕ್ಕೆ ಸ್ಪಷ್ಟ ಕಾರಣಗಳನ್ನು ಗುರುತಿಸಿ ಪರಿಹಾರ ಕಂಡುಕೊಳ್ಳುವ ದಿಕ್ಕಿನಲ್ಲಿ ಕೃಷಿ ವಿವಿಗಳು ಹೆಚ್ಚಿಗೆ ಅಧ್ಯಯನ ನಡೆಸಬೇಕು. ಇದಕ್ಕೆ ಅಗತ್ಯವಾದ ಹಣಕಾಸಿನ ನೆರವನ್ನು ಒದಗಿಸಲು ಸರಕಾರ ಸಿದ್ಧವಿದೆ ಎಂದರು.

ಅದಕ್ಕಾಗಿ ಲ್ಯಾಂಡ್ ಟು ಲ್ಯಾಬ್... ಮತ್ತು ಲ್ಯಾಬ್ ಟು ಲ್ಯಾಂಡ್ ಎಂಬ ಸಿದ್ಧಾಂತ



ಧಾರವಾಡ ಕೃಷಿ ವಿಶ್ವವಿದ್ಯಾಲಯ ಆಯೋಜಿಸಿದ್ದ ಕೃಷಿ ಮೇಳ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ ರೈತರಿಗೆ ಪ್ರಶಸ್ತಿ ಪತ್ರ ನೀಡಿದರು. ಈ ವೇಳೆ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಚಿವ ಸಂತೋಷ್ ಲಾಡ್, ಚಲುವ ನಾರಾಯಣಸ್ವಾಮಿ ಇದ್ದರು.

## ಪ್ರತಿ ತಾಲೂಕಿನಲ್ಲೂ ಹೈಟೆಕ್ ಹಾರ್ವೆಸ್ಟ್ ಹಬ್

ಕೃಷಿ ಸಚಿವ ಚಲುವರಾಯಸ್ವಾಮಿ ಕೃಷಿ ಪ್ರಕಟಣೆಗಳನ್ನು ಬಿಡುಗಡೆಗೊಳಿಸಿ ಮಾತನಾಡಿ, ಧಾರವಾಡ ಜಿಲ್ಲೆಯಲ್ಲಿ ಮತ್ತೊಂದು ಬೆಂಬಲ ಬೆಲೆ ಧಾನ್ಯ ಖರೀದಿ ಕೇಂದ್ರ ಸ್ಥಾಪಿಸಲು ಅಧಿಕಾರಿಗಳಿಗೆ ಸೂಚಿಸುತ್ತೇನೆ. ರಾಜ್ಯದಲ್ಲಿ ಸಿಎಂ ಸಿದ್ದರಾಮಯ್ಯ ಕೃಷಿಗೆ ಒತ್ತು ನೀಡಿದ್ದಾರೆ. ಧಾರವಾಡ ಕೃಷಿ ವಿವಿ ಮೆಂತೆ ಮತ್ತು ಹೆಸರು ಬಾಹ್ಯಾಕಾಶಕ್ಕೆ ಕಳಿಸಿದ್ದು, ಹತ್ತು ಹೊಸ ತಳಿ ಮತ್ತು 20 ಕೃಷಿ ತಾಂತ್ರಿಕತೆ ತೋರಿಸಿದ್ದು, ವಿಚಾರ. ಮಿಲೆಟ್ ಬೆಳೆಗಳಿಗೆ ಸರಕಾರಿಂದ ಪ್ರೋತ್ಸಾಹಧನ ನೀಡಲಾಗುತ್ತಿದೆ. ರಾಗಿ ಬೆಳೆಗಳಿಗೆ ಪ್ರೋತ್ಸಾಹ ಧನವನ್ನು ಕೊಡಲಾಗುತ್ತಿದೆ. ಉತ್ತರ ಕರ್ನಾಟಕದ ಪ್ರತಿ ತಾಲೂಕಿನಲ್ಲಿಯೂ ಹೈಟೆಕ್ ಹಾರ್ವೆಸ್ಟ್ ಹಬ್‌ಗಳನ್ನು ಮಾಡುತ್ತೇವೆ ಎಂದರು.

> ರಾಜ್ಯ ಹಾಲಿನ ಉತ್ಪಾದನೆಯಲ್ಲಿ ಎರಡನೇ ಸ್ಥಾನದಲ್ಲಿದೆ. ಸದ್ಯದಲ್ಲೇ ಮಹಾರಾಷ್ಟ್ರ ರಾಜ್ಯವನ್ನು ಹಿಂದಿಕ್ಕಿ ನಾವೇ ನಂಬರ್ ಒನ್ ಆದರೂ ಆಶ್ಚರ್ಯವಿಲ್ಲ. ಹೈನುಗಾರಿಕೆಯಲ್ಲಿ ನಾವು ಅಪಾರ ಪ್ರಗತಿ ಸಾಧಿಸಿದ್ದೇವೆ. -ಸಿದ್ದರಾಮಯ್ಯ, ಸಿಎಂ

> ಇಂದಿನ ರೈತರು ಕೃಷಿಯೇ ಬೇಡ ಎನ್ನುವ ಸ್ಥಿತಿಗೆ ಬಂದು ತಲುಪಿದ್ದಾರೆ. ತಮ್ಮ ಹೊಲಮನೆ ಮಾರಿಕೊಂಡು ನಗರಕ್ಕೆ ಬರುತ್ತಿದ್ದು, ಅಲ್ಲಿ ರಿಯಲ್ ಎಸ್ಟೇಟ್ ಉದ್ಯಮಿಗಳು ಬಡಾವಣೆ ನಿರ್ಮಿಸುತ್ತಿದ್ದಾರೆ. ಇದು ನಿಲ್ಲಬೇಕಾದರೆ, ಕೃಷಿ ವಿವಿಗಳು ಉತ್ತಮ ಸಂಶೋಧನೆ ಮಾಡಿ ಅನ್ನದಾತರಿಗೆ ಅನುಕೂಲವಾಗುವ ಕೆಲಸ ಮಾಡಬೇಕು.
> - ಬಸವರಾಜ ಹೊರಟ್ಟಿ, ಪರಿಷತ್ ಸಭಾಪತಿ

ಆಳವಡಿಸಿಕೊಂಡು ಕೃಷಿ ವಿಜ್ಞಾನಿಗಳು ಸಂಶೋಧನೆ ಮಾಡಬೇಕು. ರಾಜ್ಯದಲ್ಲಿ ಶೇ. 60ರಷ್ಟು ಭೂಮಿ ಮಳೆಯಾಶ್ರಿತವಾಗಿದ್ದು, ಇಲ್ಲಿ ಹವಾಮಾನ ವೈಪರೀತ್ಯಕ್ಕೆ ತಕ್ಕಂತೆ ಸುಸ್ಥಿರ ಕೃಷಿ ಮಾಡುವ ವಿಧಾನಗಳನ್ನು ಕೃಷಿ ವಿವಿಗಳು ಶೋಧಿಸಿ ರೈತರಿಗೆ ತಲುಪಿಸಬೇಕು ಎಂದರು.

ಇದರ ಜತೆಗೆ ರೈತರು ಕೂಡ ಕೃಷಿ ತಂತ್ರಗಾರಿಕೆ ತಿಳಿಯಬೇಕು. ಹೊಸ ಕೃಷಿ ವಿಧಾನಗಳನ್ನು ಅರಿತು ಕೃಷಿ ಮಾಡಬೇಕು. ಅದರ ಜತೆಗೆ ಒಂದಿಷ್ಟು ಉಪಕಸುಬುಗಳನ್ನು ಮಾಡಿ, ಪ್ರತಿಯೊಬ್ಬರು ಪ್ರಗತಿಪರ ರೈತರಾಗಬೇಕು. ಹೊಸ ತಳಿ ವೈದ್ಧಿ ಮಾಡಿ ರೈತರಿಗೆ ತಲುಪಿಸಬೇಕು. ವಿಶ್ವದಲ್ಲಿಯೇ ಇದು ಭಾರತ ಅತೀ ಹೆಚ್ಚು ಜನಸಂಖ್ಯೆ ಹೊಂದಿದ ದೇಶವಾಗಿದ. ತಕ್ಕಂತೆ ಆಹಾರ ಉತ್ಪಾದನೆ ಮಾಡುವ ಹೊಣೆ ಕೃಷಿ ವಿಶ್ವವಿಗಳ ಮೇಲಿದೆ ಎಂದರು.

**ಸಿರಿಧಾನ್ಯ ಉತ್ಪಾದನೆಗೆ ಉತ್ತೇಜನ ನೀಡಿ:** ಅಕ್ಕಿ, ರಾಗಿ, ಗೋಧಿಯಲ್ಲಿ ಸಕ್ಕರೆಯ ಪ್ರಮಾಣ ಹೆಚ್ಚಾಗಿದ್ದು ಡಯಾಬಿಟಿಕ್ ಸಮಸ್ಯೆ ಇರುವವರ ಪ್ರಮಾಣ ಹೆಚ್ಚುತ್ತಿದೆ. ಆದ್ದರಿಂದ ಸಕ್ಕರೆ ಪ್ರಮಾಣ ಕಡಿಮೆ ಇರುವ ಸಿರಿಧಾನ್ಯ ಕೃಷಿಗೆ ಹೆಚ್ಚಿಗೆ ಪ್ರೋತ್ಸಾಹ ನೀಡುತ್ತಿದ್ದೇವೆ. ಕೃಷಿ ವಿವಿಗಳು ಸಂಶೋಧನೆಗೆ ಕಡೆಗೆ ಗಮನ ಹರಿಸುವ ಕೆಲಸ ಮಾಡಬೇಕು. ಕಡಿಮೆ ಮಳೆಯಲ್ಲೂ ಉತ್ತಮ ಬೆಳೆ ಬೆಳೆಯುವ ರೀತಿ ಸುಸ್ಥಿರ ಕೃಷಿಗೆ ಪೂರಕವಾಗಿ ಅಧ್ಯಯನಗಳು ನಡೆಯಬೇಕು ಎಂದು ಹೇಳಿದರು.

**ಲಾಡ್, ಡಿಸಿಗೆ ಸಿಎಂ ಧನ್ಯವಾದ:** ಬೆಣ್ಣೆಹಳ್ಳದ ಪ್ರವಾಹ ನಿಯಂತ್ರಣಕ್ಕೆ 200 ಕೋಟಿ ಹಣಕೊಡಲಾಗಿದೆ. 80 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಾಗಿದೆ. 5 ಲಕ್ಷ ಹೆಕ್ಟೇರ್ ರಾಜ್ಯದಲ್ಲಿ ಬೆಳೆಹಾನಿಯಾಗಿದ್ದು, ಸರ್ವೇಗೆ ಸೂಚಿಸಲಾಗಿದೆ. ಧಾರವಾಡ ಜಿಲ್ಲೆಯಲ್ಲಿ 97 ಸಾವಿರ ಎಕರೆ ಜಂಟಿ ಸರ್ವೇ ಮಾಡಲಾಗಿದೆ. ಡಿಸಿ, ಸಚಿವ ಸಂತೋಷ ಲಾಡ್‌ಗೆ ಅಭಿನಂದನೆ ಸಲ್ಲಿಸುವೆ ಎಂದರು.

Viswavani Pg 04

# Take up farmer-friendly research: CM to agri varsities

Dec Hrd Pg 05

DHARWAD, DHNS

Chief Minister Siddaramaiah on Monday urged the agriculture department and agricultural universities to take up research and innovation and introduce new technologies to farmers by adopting 'lab to land' and 'land to lab' approach.

Addressing the gathering after inaugurating Krishi Mela on UAS-Dharwad campus, Siddaramaiah said, "Rain-fed agriculture accounts for more than 60% of farming in the state. The agri universities should educate the farmers about the crops to be cultivated and cropping patterns.

The chief minister said that the early rains and a favorable monsoon had encouraged farmers to take up sowing on a larger scale this season, with the cultivable area expanding to 80 lakh hectares

"However, excess rains in several districts, including Dharwad, have caused extensive crop damage," the CM said According to preliminary assessments, standing crops spread across more than five lakh hectares have been destroyed.




**Chief Minister Siddaramaiah speaks after inaugurating Krishi Mela at UAS-Dharwad campus on Monday.** DH PHOTO

Siddaramaiah assured that deputy commissioners have been instructed to conduct joint surveys of the damage, and compensation will be disbursed soon after the reports are submitted. "There is no dearth of funds to provide compensation," he added.

Saying that the food production is decreasing due to the diminishing soil fertility, the chief minister urged the scientists to look into the ways to improve the soil fertility.

Agriculture Minister N Cheluvarayaswamy announced that the government would construct 12,000 farm ponds and promote 6,000 agri-startups. "Each startup will receive financial assistance of Rs 15 lakh," he said. He added that the long-awaited Krishi Vigyan Kendra in Vijayapura and the College of Agricultural Sciences in Belagavi will be established soon.

# ರೋಗ ನಿರೋಧಕ ಶಕ್ತಿಗೆ ಹೆಸರಾದ ದೇಶಿ ಗೋತಳಿಗಳು


ಧರಣಿ ಮಂಡಲ
•ಕೆ.ಎನ್. ಶೈಲೇಶ್ ಹೊಳ್ಳ
shyleshholla@gmail.com




ಭಾರತೀಯ ಗೋತಳಿಗಳು ಅಥವಾ ಸ್ಥಳೀಯ ಗೋತಳಿಗಳ ಸಂಖ್ಯೆಯು 2007, 2012 ಮತ್ತು 2019ರ ಪ್ರಾಣಿಗಣತಿಯ ಪ್ರಕಾರ ಭಾರತೀಯ ಗೋತಳಿಗಳು ಅಥವಾ ಸ್ಥಳೀಯ ಗೋತಳಿಗಳ ಸಂಖ್ಯೆ ನಿಧಾನಗತಿಯಲ್ಲಿ ಏರಿಕೆಯನ್ನು ಕಾಣುತ್ತಿರುವುದು ಕಂಡುಬಂದಿದೆ. 2007ರ ಗಣತಿ ಪ್ರಕಾರ ಮಿಶ್ರ ತಳಿಗಳಲ್ಲಿನ ಹೆಣ್ಣುಗಳ ಸಂಖ್ಯೆ 26.21 ಮಿಲಿಯನ್ ಆಗಿದ್ದರೆ, ದೇಶಿ ಹೆಣ್ಣು ಗೋತಳಿಗಳ ಸಂಖ್ಯೆ 89.23 ಮಿಲಿಯನ್ ಮತ್ತು ಎಮ್ಮೆಗಳ ಸಂಖ್ಯೆ 85.74 ಮಿಲಿಯನ್‌ನಷ್ಟಿರುವುದು ಗೋಚರಿಸಿತ್ತು. 2012ರಲ್ಲಿ ಮಿಶ್ರ ತಳಿಗಳಲ್ಲಿನ ಹೆಣ್ಣುಗಳ ಸಂಖ್ಯೆ 33.76 ಮಿಲಿಯನ್‌ಗೆ ಏರಿದರೆ, ದೇಶಿ ಗೋತಳಿಗಳಲ್ಲಿನ ಹೆಣ್ಣುಗಳ ಸಂಖ್ಯೆ 89.22 ರಷ್ಟಾಗಿದ್ದು, ಸ್ವಲ್ಪ ಪ್ರಮಾಣದ ಕುಸಿತವನ್ನು ಕಂಡಿತ್ತು. ಹಾಗೆಯೇ ಎಮ್ಮೆಗಳ ಸಂಖ್ಯೆ ಸ್ವಲ್ಪ ಏರಿಕೆ ಕಂಡು 92.70 ಮಿಲಿಯನ್‌ಗೆ ಏರಿತ್ತು. ಇನ್ನು 2019ರಲ್ಲಿ ಮಿಶ್ರ ತಳಿಗಳಲ್ಲಿನ ಹೆಣ್ಣುಗಳ ಸಂಖ್ಯೆ 46.95 ಮಿಲಿಯನ್‌ನಷ್ಟು ಏರಿಕೆ ಕಂಡಿದ್ದರೆ, ದೇಶಿ ತಳಿಗಳಲ್ಲಿ ಹೆಣ್ಣುಗಳ ಸಂಖ್ಯೆ 98.17 ಮಿಲಿಯನ್ ನಷ್ಟಾಗಿದ್ದು ಕೊಂಚ ಏರಿಕೆಯನ್ನು ಕಂಡಿತ್ತು. ಹಾಗೇ ಎಮ್ಮೆಗಳ ಸಂಖ್ಯೆ 100.57 ಮಿಲಿಯನ್‌ನೊಂದಿಗೆ ಕೊಂಚ ಏರಿಕೆಯನ್ನು ಕಂಡಿತ್ತು.

ನಮ್ಮ ದೇಶದಲ್ಲಿ ಹಾಲಿನ ಉತ್ಪಾದನೆಯನ್ನು ಹೆಚ್ಚಿಸುವ ಉದ್ದೇಶದಿಂದ ವಿದೇಶಿ ಮತ್ತು ಮಿಶ್ರ ತಳಿಗಳನ್ನು ಪರಿಚಯಿಸಲಾಯಿತು ಎಂಬುದು ತಿಳಿದ ವಿಚಾರವೇ ಆಗಿದ್ದರೂ, ಇದರಿಂದ ಭಾರತೀಯ ಗೋತಳಿಗಳು ಗಣನೀಯ ಪ್ರಮಾಣದಲ್ಲಿ ಕುಸಿತವನ್ನು ಕಂಡಿದ್ದು ಮತ್ತು ಕಾಣುತ್ತಿರುವುದು ಬಹುತೇಕ ದೇಶವಾಸಿಗಳಿಗೆ ಇಂದಿಗೂ ಅರಿವಿಗೆ ಬಂದಿಲ್ಲ. ದೇಶಿ ಗೋತಳಿಗಳು ಎಲ್ಲಾ ರೀತಿಯಲ್ಲೂ ಇತರೆ ಎಲ್ಲಾ ತಳಿಗಳಿಗಿಂತ ಅತಿ ಶ್ರೇಷ್ಠವಾಗಿವೆ ಎಂಬುದು ಇಲ್ಲಿಯ ಪಶುಪಾಲಕರಿಗಿರಲೀ ಸರ್ಕಾರಕ್ಕೆ ತಿಳಿಯದೇ ಇರುವುದು ನಿಜಕ್ಕೂ ದುರಾದೃಷ್ಟಕರ.ದೇಶಿತಳಿಗಳಲ್ಲಿನಒಂದುವೈಶಿಷ್ಟ್ಯವೇನೆಂದರೆಇವುಅತಿವಿರಳವಾಗಿ ಅನಾರೋಗ್ಯಕ್ಕೆ ತುತ್ತಾಗುತ್ತವೆ. ಒಂದೊಮ್ಮೆ ಅನಾರೋಗ್ಯಕ್ಕೆ ಒಳಗಾದರೂ ಸುಲಭವಾಗಿ ನೀಡುವ ಸಾಂಪ್ರದಾಯಿಕ ಮನೆಮದ್ದಿನಿಂದಲೇ ಗುಣಮುಖವಾಗುತ್ತವೆ. ಒಬ್ಬ ಪಶುವೈದ್ಯಾಕಾರಿ ಒಂದು ದಿನದಲ್ಲಿ ಸುಮಾರು 15 ರಿಂದ 20 ಹಸುಗಳಿಗೆ ಚಿಕಿತ್ಸೆ ನೀಡುವ ಸಂದರ್ಭದಲ್ಲಿ ಕೇವಲ ಒಂದೆರಡು ದೇಶಿ ತಳಿಗಳು ಮಾತ್ರ ಚಿಕಿತ್ಸೆಗೆ ಒಳಗಾಗುವುದು ಇದಕ್ಕೆ ಸಾಕ್ಷಿಯಾಗಿದೆ.

ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್(ಐ.ಸಿ.ಎ.ಆರ್.)ನ ನ್ಯಾಷನಲ್ ಬ್ಯೂರೊ ಆಫ್ ಅನಿಮಲ್ ಜೆನೆಟಿಕ್ ರಿಸೋರ್ಸಸ್ ಮತ್ತು ಪ್ರಾಣಿಗಳ ಅನುವಂಶಿಕ ಸಂಪನ್ಮೂಲಗಳ ಮಾಜಿ ಮುಖ್ಯಸ್ಥರಾದ ಡಿ.ಕೆ. ಸಾಧನಾರವರು, ದೇಶಿ ಗೋತಳಿಗಳು ಹೆಚ್ಚಿನ ಶಾಖ ಸಹಿಷ್ಣುತೆ ಮತ್ತು ರೋಗ ನಿರೋಧಕ ಕ್ಷಮತೆಯನ್ನು ಹೊಂದಿವೆ. ಇವುಗಳ ದೇಹದ ಗಾತ್ರ ಚಿಕ್ಕದಾಗಿದ್ದು, ಹೆಚ್ಚು ಬೆವರು ಗ್ರಂಥಿಗಳನ್ನು ಹೊಂದಿರುತ್ತವೆ. ಇದು ದೇಹದ ಶಾಖವನ್ನು ಹೊರಹಾಕಲು ಸಹಾಯ ಮಾಡುತ್ತದೆ ಎಂಬುದಾಗಿ ತಿಳಿಸಿದ್ದಾರೆ. ಇವರು ಹೀಗೆ ಹೇಳಿರುವುದನ್ನು ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಫಾರ್ ರಿಸರ್ಚ್ ಆನ್ ಕ್ಯಾಟಲ್‌ನ ಪ್ರಾಧ್ಯಾಪಕರು ಮತ್ತು ವಿಜ್ಞಾನಿಯಾದ ರವೀಂದ್ರ ಕುಮಾರ್ ರವರು ಸಮರ್ಥಿಸಿಕೊಳ್ಳುತ್ತಾ, ರಾಜಸ್ಥಾನದಲ್ಲಿ ಹಾಲಿಗೂ ಮತ್ತು ದುಡಿಮೆಗೂ ಹೆಸರುವಾಸಿಯಾದ ಮತ್ತು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುವ ಥಾರ್‌ಪಾರ್ಕರ್ ಎಂಬ ತಳಿಯೇ ಇದಕ್ಕೆ ಸಾಕ್ಷಿ ಎಂಬುದಾಗಿ ತಿಳಿಸಿದ್ದಾರೆ. ಈ ತಳಿಯು ಚಳಿಗಾಲದಲ್ಲಿ ಹೆಚ್ಚಿನ ಶಾಖವನ್ನು ಹೀರಿಕೊಳ್ಳುವ ಉದ್ದೇಶದಿಂದ ತನ್ನ ದೇಹದ ಬಣ್ಣವನ್ನು ಕಂದು ಬಣ್ಣಕ್ಕೆ ತಿರುಗಿಸಿಕೊಳ್ಳುತ್ತದೆ. ಇದು ದೇಶಿ ಗೋವುಗಳು ಸ್ಥಳೀಯ ಹವಾಗುಣಕ್ಕೆ ಹೇಗೆ ಹೊಂದಿಕೊಳ್ಳುತ್ತವೆ ಎಂಬುದಕ್ಕೆ ಉತ್ತಮ ಉದಾಹರಣೆಯಾಗಿದೆ. ಈ ವಿದೇಶಿ ಅಥವಾ ಮಿಶ್ರ ತಳಿಗಳ ಖರೀದಿ ಮತ್ತು ನಿರ್ವಹಣೆ ಅತ್ಯಂತ ದುಬಾರಿಯಾದುದಾಗಿದೆ. ಇವುಗಳಿಗೆ ಉತ್ಕೃಷ್ಟ ಆಹಾರದ ಅವಶ್ಯಕತೆ ಇದ್ದು, ನಿಯಮಿತವಾಗಿ ಇವುಗಳ ಮೈ ತೊಳೆಯಲೇ ಬೇಕಿದೆ. ಇವುಗಳಿಗೆ ಉಷ್ಣದಿಂದ ರಕ್ಷಣೆ ನೀಡಲು ಫ್ಯಾನ್‌ಗಳ ಅವಶ್ಯಕತೆ ಇದ್ದು, ಪ್ರತ್ಯೇಕವಾದ ಸ್ಥಳದ ಅಗತ್ಯವೂ ಇದೆ. ಇದೆಲ್ಲದರ ಜೊತೆಗೆ ಇವುಗಳಿಗೆ ಸರಿಯಾದ ಪೋಷಕಾಂಶಗಳು ದೊರೆಯದೇ ಹೋದಲ್ಲಿ ಇವುಗಳು ಬೇಗನೇ ಹಲವು ಸಾಕಷ್ಟು ಕಾಯಿಲೆಗಳಿಗೆ ತುತ್ತಾಗುವುದಷ್ಟೇ ಅಲ್ಲದೆ ಬಂಜೆಯಾಗುತ್ತವೆ ಎಂಬುದಾಗಿ ತಿಳಿಸಿದ್ದಾರೆ.

2023ರಲ್ಲಿ ಉತ್ತರಪ್ರದೇಶದ ಖ್ಯಾತ ಸಂಶೋಧಕರು ದೇಶಿ ಗೋತಳಿಗಳ ಕುರಿತಂತೆ ನಡೆಸಿದ ಅಧ್ಯಯದ ವರದಿ ಏಷ್ಯನ್ ಜರ್ನಲ್ ಆಫ್ ಡೇರಿ ಆ್ಯಂಡ್ ಫುಡ್ ರಿಸರ್ಚ್‌ನಲ್ಲಿ ಪ್ರಕಟವಾಗಿತ್ತು. ಆ ವರದಿಯಲ್ಲಿ ಭಾರತೀಯ ಗೋತಳಿಗಳು ಹೆಚ್ಚಿನ ರೋಗ ನಿರೋಧಕ ಶಕ್ತಿಯನ್ನು ಹೊಂದಿದ್ದು, ವೆಕ್ಟರ್-ಟ್ರೈಪನೋಸೋಮಿಯಾಸಿಸ್, ಟಿಕ್-ಬರೇಡ್ ಬೇಬಿಸಿಯೋಸಿಸ್ ಮತ್ತು ಥೈಲೆರಿಯೋಸಿಸ್ ಎಂಬಕಾಯಿಲೆಗಳನ್ನುಎದುರಿಸುವಶಕ್ತಿಯನ್ನುಹೊಂದಿವೆ ಎಂಬುದಾಗಿ ತಿಳಿಸಲಾಗಿತ್ತು. ಹಾಗೆಯೇ 2021ರ ಚೆನ್ನೈನಲ್ಲಿರುವ ತಮಿಳುನಾಡು ಪಶುವೈದ್ಯಕೀಯ ಮತ್ತು ಸಂಶೋಧಕರ ಒಂದು ಅಧ್ಯಯನದ ಪ್ರಕಾರ ಥೈಲೆರಿಯೋಸಿಸ್ ಎಂಬ ಕಾಯಿಲೆಯು ಯುರೋಪಿನ ತಳಿಗಳಲ್ಲಿ ಅಂದರೆ ವಿದೇಶಿ ತಳಿಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಆಷ್ಟೇ ಅಲ್ಲದೆ ಈ ಕಾಯಿಲೆಗೆ ತುತ್ತಾಗಿ ಇವುಗಳು ಸಾಯುವ ಪ್ರಮಾಣವು ಶೇಕಡಾ 40 ರಿಂದ 90 ರಷ್ಟಿರುತ್ತದೆ. ಆದರೆ ಭಾರತೀಯ ಗೋತಳಿಗಳಲ್ಲಿ ಈ ಮರಣ ಪ್ರಮಾಣವು ಕೇವಲ ಶೇಕಡಾ 3 ರಷ್ಟು ಮಾತ್ರ ಇದೆ ಎಂಬುದಾಗಿ ತಿಳಿಸಿದೆ.

2020ರಲ್ಲಿ ಹರಿಯಾಣದ ಕರ್ನಾಲ್‌ನಲ್ಲಿರುವ ನ್ಯಾಷನಲ್ ಡೇರಿ ರಿಸರ್ಚ್ ಇನ್‌ಸ್ಟಿಟ್ಯೂಟ್(ಎನ್.ಡಿ.ಆರ್.ಐ.) ಮಿಶ್ರ ತಳಿಗಳ ಕುರಿತಂತೆ ಮತ್ತು ಹಾಲಿನ ಇಳುವರಿಯನ್ನು ಹೆಚ್ಚಿಸುವ ಕುರಿತಂತೆ ಒಂದು ಅಧ್ಯಯನವನ್ನು ನಡೆಸಿತ್ತು. ಅದು ವಿದೇಶಿ ತಳಿಯಾದ ಬ್ರೌನ್ ಸ್ವಿಸ್‌ನ ಮಿಶ್ರ ತಳಿಯಾದ ಕರಣ್ ಸ್ವಿಸ್ ಮತ್ತು ಸ್ಥಳೀಯ ತಳಿಯಾದ ಸಾಹಿವಾಲ್‌ನಿಂದ ಮಿಶ್ರ ತಳಿಯೊಂದನ್ನು ಸೃಷ್ಟಿಸಿತ್ತು. ಸಾಹಿವಾಲ್ ತಳಿಯನ್ನು ಆಯ್ಕೆ ಮಾಡಲು ಪ್ರಮುಖ ಕಾರಣ ಈ ತಳಿ ಹೆಚ್ಚಿನ ಇಳುವರಿ ನೀಡುವುದಷ್ಟೇ ಅಲ್ಲದೆ ರೋಗ ನಿರೋಧಕ ಶಕ್ತಿಗೆ ಮತ್ತು ಶಾಖ ಸಹಿಷ್ಣುತೆಗೆ ಇಂದಿಗೂ ಹೆಸರುವಾಸಿಯಾದುದಾಗಿದೆ. ಹೀಗೆ ಇವುಗಳ ಸಂಕರಣದಿಂದ ಸೃಷ್ಟಿಯಾದ ಮಿಶ್ರ ತಳಿಯ ಮೊದಲ ಪೀಳಿಗೆಯು ಶೇಕಡಾ 56ರಷ್ಟು ಹೆಚ್ಚಿನ ಹಾಲನ್ನು ನೀಡಿತ್ತು. ಆದರೆ ಇದರ ಎರಡನೇ ಪೀಳಿಗೆಯು ನೀಡಿದ ಹಾಲಿನ ಪ್ರಮಾಣದಲ್ಲಿ ಶೇಕಡಾ 24.5ರಷ್ಟು ಕುಸಿತವನ್ನು ಕಂಡಿತ್ತು. ಈ ಅಧ್ಯಯನವು ವಿದೇಶಿ ಮತ್ತು ಮಿಶ್ರ ತಳಿಗಳು ನೀಡುವ ಹಾಲಿನ ಸ್ಥಿರತೆಯಲ್ಲಿ ಗಣನೀಯ ಕಡಿತವಾಗುವುದನ್ನು ಸ್ಪಷ್ಟೀಕರಿಸಿತ್ತು.

ಇತ್ತೀಚಿನ ದಿನಗಳಲ್ಲಿ ದೇಶವು ಸ್ಥಳೀಯ ಜಾನುವಾರು ತಳಿಗಳ ಸಂರಕ್ಷಣೆಯ ಕುರಿತಂತೆ ಹೆಚ್ಚಿನ ನಿಗಾ ವಹಿಸುತ್ತಿದೆ. ಇದೇ ಕಾರಣಕ್ಕೆ ರಾಷ್ಟ್ರೀಯ ಗೋಕುಲ್ ಮಿಷನ್ ಸ್ಥಾಪಿಸಲಾಗಿದ್ದು, ಇದು ದೇಶಿ ತಳಿಗಳನ್ನು ಉಳಿಸಿ ಸಂವರ್ಧಿಸುವ ಕಾಯಕದಲ್ಲಿ ತೊಡಗಿಸಿಕೊಂಡಿದೆ. ಹೀಗಾಗಿಯೇ ಡಿಸೆಂಬರ್ 2014 ರಂದು ಸುಮಾರು 2,025 ಕೋಟಿ ರೂಪಾಯಿಗಳನ್ನು ಈ ಮಿಷನ್‌ನ ಅಡಿಯಲ್ಲಿ ತೆಗೆದಿರಿಸಲಾಗಿತ್ತು. ರಾಷ್ಟ್ರೀಯ ಗೋಕುಲ್ ಮಿಷನ್ ಮುಖ್ಯವಾಗಿ ಕೃತಕ ಗರ್ಭಧಾರಣೆಯ ಮೂಲಕ ದೇಶಿ ಗೋತಳಿಗಳನ್ನು ವೇಗವಾಗಿ ಸಂವರ್ಧಿಸುವುದು, ಲಿಂಗ ವಿಂಗಡಣೆಯ ವೀರ್ಯ ಕೇಂದ್ರಗಳನ್ನು ಸ್ಥಾಪಿಸಿ ಹೆಚ್ಚು ಹೆಣ್ಣು ಕರುಗಳು ಹುಟ್ಟುವಂತೆ ಮಾಡುವುದು, ರೈತರಿಗೆ ಜಾಗೃತಿ ಮತ್ತು ಕೌಶಲ್ಯ ಅಭಿವೃದ್ಧಿ ನೀಡುವುದು, ಐ.ವಿ.ಎಫ್. ಕೇಂದ್ರಗಳನ್ನು ಸ್ಥಾಪಿಸುವುದು, ಹೀಗೆ ಹಲವು ಮಜಲುಗಳಲ್ಲಿ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡಿದೆ. ಈ ಉದ್ದೇಶಕ್ಕಾಗಿಯೇ 2021-26ನೇ ಸಾಲಿನಲ್ಲಿ ಸುಮಾರು 2,400 ಕೋಟಿ ಹಣವನ್ನು ಇದಕ್ಕಾಗಿ ಮೀಸಲಿರಿಸಲಾಗಿದೆ.

ರಾಷ್ಟ್ರೀಯ ಗೋಕುಲ್ ಮಿಷನ್‌ನ ಮೊದಲ ಹಂತದಲ್ಲಿ ಕೃತಕ ಗರ್ಭಧಾರಣೆಅವಶ್ಯಕವಾದಉತ್ತಮಜಾತಿಯಸದೃಢಸುಮಾರು5,417ಹೋರಿಗಳನ್ನು ಗುರುತಿಸಲಾಗಿತ್ತು. ಆದರೆ ಇವುಗಳ ಸಂಖ್ಯೆ 2019ರ ಸುಮಾರಿಗೆ 1,841ಕ್ಕೆ ಇಳಿಸಲಾಯಿತು. ಕೃಷಿ ಹಾಗೂ ಪಶುಸಂಗೋಪನೆ ಮತ್ತು ಆಹಾರದ ಸಂಸದೀಯ ಸ್ಥಾಯಿ ಸಮಿತಿಯ 49ನೇ ವರದಿಯ ಪ್ರಕಾರ, ಈ ಮಿಷನ್‌ನ ಅಡಿಯಲ್ಲಿ ಸುಮಾರು 50 ಭ್ರೂಣ ವರ್ಗಾವಣೆ ತಂತ್ರಜ್ಞಾನ ಮತ್ತು ಐ.ವಿ.ಎಫ್. ಪ್ರಯೋಗಾಲಯಗಳು ಮತ್ತು 10 ಸೆಕ್ಸ್ ಸಾರ್ಟಡ್ ಅಂದರೆ ಲೈಂಗಿಕ ವಿಂಗಡಣೆಯ ವೀರ್ಯ ಕೇಂದ್ರಗಳನ್ನು ಸ್ಥಾಪಿಸುವ ಗುರಿಯನ್ನು ಹೊಂದಲಾಗಿತ್ತು. ಆದರೆ ಇಲ್ಲಿಯವರೆಗೂ ಕೇವಲ 19 ಭ್ರೂಣ ವರ್ಗಾವಣೆ ತಂತ್ರಜ್ಞಾನ ಮತ್ತು ಐ.ವಿ.ಎಫ್. ಪ್ರಯೋಗಾಲಯಗಳನ್ನು ಮಾತ್ರ ಮಂಜೂರು ಮಾಡಲಾಗಿದ್ದು, ಇದರಲ್ಲಿ ಕೇವಲ ನಾಲ್ಕು ಕೇಂದ್ರಗಳು ಮಾತ್ರ ಇಂದು ಕಾರ್ಯ ನಿರ್ವಹಿಸುತ್ತಿವೆ. ಈ ಯೋಜನೆಯಲ್ಲಿ ಸಾಕಷ್ಟು ಸವಾಲುಗಳಿದ್ದು, ಇದರ ಅಡಿಯಲ್ಲಿ ಉತ್ತರಪ್ರದೇಶ, ಹರಿಯಾಣ ಮತ್ತು ಬಿಹಾರ ರಾಜ್ಯಗಳು ರೈತರಿಗೆ ದೇಶಿ ಗೋವುಗಳನ್ನು ಖರೀದಿಸಲು ಮತ್ತು ಸಾಕಲು ಪ್ರೋತ್ಸಾಹ ನೀಡುತ್ತಿವೆ. ಹಿಮಾಚಲ ಪ್ರದೇಶವು ದೇಶಿ ಗೋವುಗಳನ್ನು ಹಾಲಿಗೆ ಮಾತ್ರವಲ್ಲದೆ ನೈಸರ್ಗಿಕ ಮತ್ತು ಸಾವಯವ ಕೃಷಿಯಲ್ಲಿ ಬಳಸುವುದಕ್ಕೂ ಉತ್ತೇಜಿಸುತ್ತಿದೆ. ವಿಪರ್ಯಾಸವೆಂದರೆ ಇದ್ಯಾವುದನ್ನು ಕರ್ನಾಟಕದಲ್ಲಿ ನಿರೀಕ್ಷಿಸುವುದು ತಪ್ಪಾಗುತ್ತದೆ.

Hosadiganta pg 08

V-karnataka pg 10

# ಅಡುಗೆ ಮನೆಯಲ್ಲಿ ಲ್ಯಾವೆಂಡರ್ ಎಣ್ಣೆಯ ಘಮ

ಲವಲವಿಕ ಕಿಚನ್ TIPS

ಲ್ಯಾವೆಂಡರ್ ಸಾರಭೂತ ತೈಲವು ಅದರ ಆಹ್ಲಾದಕರ ಪರಿಮಳ ಮತ್ತು ನಂಜು ನಿರೋಧಕ ಗುಣಲಕ್ಷಣಗಳಿಂದಾಗಿ ಖ್ಯಾತ. ಇದನ್ನು ಅಡುಗೆ ಮನೆಯ ಸ್ವಚ್ಛತೆಯಲ್ಲಿ ಕೂಡ ಬಳಕೆ ಮಾಡಬಹುದು. ಇದನ್ನು ಬಳಸಿ ಮನೆಯಲ್ಲೇ ಸುಲಭವಾಗಿ ಕ್ಲೀನಿಂಗ್ ಸ್ಪ್ರೇ ತಯಾರಿಸಬಹುದು. ಇದು ನಿಮ್ಮ ಕಿಚನ್ ಕೌಂಟರ್ ಟಾಪ್, ಟೇಬಲ್‌ಗಳು ಮತ್ತು ಇತರೇ ವಸ್ತುಗಳ ಮೇಲ್ಮೈಗಳನ್ನು ಸ್ವಚ್ಛಗೊಳಿಸಲು ಸಹಾಯ ಮಾಡುತ್ತದೆ. ಒಂದು ಸ್ಪ್ರೇ ಬಾಟಲಿಯಲ್ಲಿ 1 ಕಪ್ ನೀರು, 1 ಕಪ್ ವಿನೆಗರ್ ಮತ್ತು 15-20 ಹನಿಗಳ ಲ್ಯಾವೆಂಡರ್ ಎಣ್ಣೆಯನ್ನು ಮಿಶ್ರಣ ಮಾಡಿ. ಬಾಟಲಿಯನ್ನು ಚೆನ್ನಾಗಿ ಶೇಕ್ ಮಾಡಿ ಮತ್ತು ಅಗತ್ಯವಿರುವ ಸ್ಥಳಗಳಲ್ಲಿ ಸಿಂಪಡಿಸಿ. ನಂತರ ಸ್ವಚ್ಛ ಬಟ್ಟೆಯಿಂದ ಒರೆಸಿ. ವಿನೆಗರ್ ಜಿಡ್ಡಿನ ಕಲೆಗಳನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ ಮತ್ತು ಲ್ಯಾವೆಂಡರ್ ಆಹ್ಲಾದಕರ ಪರಿಮಳವನ್ನು ನೀಡುತ್ತದೆ. ಪಾತ್ರೆ ತೊಳೆಯುವ ದ್ರವಕ್ಕೆ ಕೆಲವು ಹನಿಗಳ ಲ್ಯಾವೆಂಡರ್ ಎಣ್ಣೆಯನ್ನು ಸೇರಿಸುವುದರಿಂದ ಅದು ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ. ಇದು ಪಾತ್ರೆಗಳಿಗೆ ಉತ್ತಮ ಸುವಾಸನೆಯನ್ನು ನೀಡುತ್ತದೆ.



ಅಡುಗೆ ಮನೆಯಲ್ಲಿ ಬರುವ ದುರ್ವಾಸನೆಯನ್ನು ಹೋಗಲಾಡಿಸಲು ಲ್ಯಾವೆಂಡರ್ ಪರಿಣಾಮಕಾರಿ. ಕಸದ ಬುಟ್ಟಿಯ ಕೆಳಭಾಗದಲ್ಲಿ ಕೆಲವು ಹನಿಗಳ ಲ್ಯಾವೆಂಡರ್ ಎಣ್ಣೆಯನ್ನು ಹಾಕುವುದರಿಂದ ಕೆಟ್ಟ ವಾಸನೆ ಕಡಿಮೆಯಾಗುತ್ತದೆ. ಸಿಂಕ್‌ಗೆ ಬಿಸಿನೀರು ಮತ್ತು ಕೆಲವು ಹನಿ ಲ್ಯಾವೆಂಡರ್ ಎಣ್ಣೆ ಹಾಕಿ. ಇದು ಡ್ರೈನ್‌ಗಳನ್ನು ತಾಜಾ ಆಗಿರಿಸಲು ಸಹಾಯ ಮಾಡುತ್ತದೆ.